ಶ್ರೀ ಡಿ. ಹಲಗೇಗೌಡ :—ಈಗಾಗಲೇ ಆ ಕೆರೆಯನ್ನು ಕಟ್ಟಿ 20–30 ವರ್ಷಗಳಾಗಿದೆ. ಈಗ ಆ ಕೆರೆಗೆ ಇರತಕ್ಕ ಫೀಡರ್ ಚಾನಲ್‌ಅನ್ನು ವಿಶಾಲ ಮಾಡಿದರೆ ಹೆಚ್ಚಿಗೆ ನೀರು ಬರುತ್ತದೆ. ಆದ್ದರಿಂದ ಈ ಮುಳುಗಡೆ ಆಗತಕ್ಕ ಹಳ್ಳಿಗಳ ರೈತರಿಗೆ ಲಿಫ್ಟ್ ಇರಿಗೇಷನ್ ಮುಖಾಂತರ ವ್ಯವಸಾಯಕ್ಕೆ ನೀರನ್ನು ಒದಗಿಸುವುದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ :—ಈಗ ಆ ಕೆರೆಯ ಕೆಳಗೆ ಇರತಕ್ಕ ಅಚ್ಚುಕಟ್ಟಿಗೆ ಎಷ್ಟು ನೀರು ಬೇಕೋ ಅದಕ್ಕಿಂತ ಹೆಚ್ಚು ನೀರು ಬರತಕ್ಕಂಥಾ ಪರಿಸ್ಥಿತಿ ಇದ್ದರೆ ಮಾನ್ಯ ಸದಸ್ಯರ ಸಲಹೆಯನ್ನು ವಿಚಾರ ಮಾಡುತ್ತೇವೆ.

ಶ್ರೀ ಡಿ. ಹಲಗೇಗೌಡ :—ಈಗ ಇರತಕ್ಕ ಫೀಡರ್ ಚಾನಲ್‌ಅನ್ನು ವಿಶಾಲ ಮಾಡಿಸಿ ಇನ್ನೊಂದು ಹಳ್ಳಕ್ಕೆ ಗ್ರೇಪ್ ವಾಲ್ ಹಾಕಿದರೆ ಈ ಕೆರೆಗೆ ನೀರು ಬರತಕ್ಕ ಅಪ್ರಯ ಇದೆ. ಆದ್ದರಿಂದ ಅದನ್ನು ಪರಿಶೀಲನೆ ಮಾಡಿ ಲಿಫ್ಟ್ ಇರಿಗೇಷನ್ ಮುಖಾಂತರ ಈ ಮುಳುಗಡೆ ಪ್ರದೇಶಕ್ಕೆ ರೈತರಿಗೆ ನೀರನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ :—ಅದನ್ನು ವಿಚಾರ ಮಾಡಿ ಇನ್‌ವೆಸ್ಟಿಗೇಷನ್ ಮಾಡಿಸಿ ಅದು ಆಗುವುದಾದರೆ ಆಗತ್ಯವಾಗಿ ಮಾಡಿಸಿಕೊಡುತ್ತೇನೆ.

Short Notice Question and Answer

FAMILY PENSION

Sri MALLIKARJUNA KHARGE (Gurmitkal) And
Sri B. G. BANAKAR (Hirekerur).—

52. Will the Minister for Finance be pleased to state :—

(a) Whether he has announced in the Budget speech that the min i-mum rate of family pension has been increased from Rs. 30 per month to Rs. 40 per month to those who are drawing family pension ;

(b) Whether it has come to the notice of Government that some widows of Government servants whose husbands expired before the year 1964 (1st December, 1964) and who have no means of livelihood have been denied their family pension, but widows of those Govern-ment servants whose husbands expired on or after 1st December, 1964 are eligible to draw this pension till their lifetime ;

(c) If so, whether Government on humanitarian grounds have any proposals before them to continue payment of family pension to those widows also (of Government servants who expired before 1-12-1964) till their lifetime ;

(d) If so, the details of the proposal and the proposed date from which it will be made applicable ?

Sri M. Y. GHORPADE (Minister for Finance) :—

(a) Yes.
(b) No.
(c) Does not arise.
(d) Does not arise.

ಶ್ರೀ ಬಿ. ಜಿ. ಬಣಕಾರ್ :—ರಾಜ್ಯದಲ್ಲಿ ಕುಟುಂಬ ವಿಶ್ರಾಂತಿ ವೇತನವನ್ನು ಎಷ್ಟು ಜನಗಳಿಗೆ ಕೊಡುತ್ತಿದ್ದೀರಿ, ಮತ್ತು ಯಾವ ಅವಧಿಗೆ ಈ ವಿಶ್ರಾಂತಿ ವೇತನವನ್ನು ಕೊಡುತ್ತೀರಿ ?

ಶ್ರೀ ಎಂ. ವೈ. ಘೋರ್ಪಡೆ :—ಎಷ್ಟು ಕುಟುಂಬಗಳಿಗೆ ಕುಟುಂಬ ವಿಶ್ರಾಂತಿ ವೇತನವನ್ನು ಕೊಟ್ಟಿದೆ ಎನ್ನುವ ಅಂಕಿ ಅಂಶಗಳು ಈಗ ನನ್ನ ಹತ್ತಿರ ಇಲ್ಲ. ಈಗ ಇರತಕ್ಕ ರೂಲ್ಸ್ 1974ನೇ ಇಸವಿಯಿಂದ ಜಾರಿಯಲ್ಲಿದೆ. 1956 ನೇ ಇಸವಿಯಲ್ಲಿ ಹಳೆಯ ಪೆನ್‌ಷನ್ ಸ್ಕೀಮು ಜಾರಿಯಲ್ಲಿತ್ತು. 1964 ನೇ ಇಸವಿಯಲ್ಲಿ ಹೊಸ ಪೆನ್‌ಷನ್ ಸ್ಕೀಮು ಜಾರಿಗೆ ಬಂದಾಗ 10 ವರ್ಷಗಳಿಗಿಂತ ಹೆಚ್ಚಿಗೆ ಸರ್ವೀಸ್ ಆಗದೇ ಇದ್ದವರಿಗೆ ಈ ಕುಟುಂಬ ವಿಶ್ರಾಂತಿ ವೇತನ ಯಾರಿಗೂ ಸಿಕ್ಕುತ್ತಾ ಇರಲಿಲ್ಲ. ಆದ್ದರಿಂದ ಆಗ ಲೈಫ್ ಪೆನ್‌ಷನ್ ಕೊಡುವ ವ್ಯವಸ್ಥೆ ಆಯಿತು. ಆಗ ಹಳೆಯ ಪೆನ್‌ಷನ್‌ದಾರರು ಯಾರು ಇದ್ದರು, ಅವರಿಗೂ ಸಹ 10 ವರ್ಷ ಮುಗಿದ ನಂತರ ಆಟೋಮ್ಯಾಟಿಕ್ ಆಗಿ ಹೊಸ ಪೆನ್‌ಷನ್ ಸ್ಕೀಮು ಅಪ್ಲೈ ಆಗುವಂತೆ ಮಾಡಲಾಯಿತು. ಆಗ ಅವರಿಗೆ ಹಳೆಯ ಪೆನ್‌ಷನ್ ಪ್ರಕಾರ ಏನು ಪೆನ್‌ಷನ್ ಬರುತ್ತಿತ್ತು ಅದರಲ್ಲಿ ಅರ್ಧ ಮಾತ್ರ ಪೆನ್‌ಷನ್ ಸಿಕ್ಕುತ್ತಿತ್ತು. ಆಮೇಲೆ 1968 ರಲ್ಲಿ ಹಳೆಯ ಪೆನ್‌ಷನ್‌ದಾರರೂ ಸಹ ಹೊಸ ಪೆನ್‌ಷನ್ನಿಗೆ ಆಪ್ಟ್ ಮಾಡುವ ಅವಕಾಶವನ್ನು ಕೊಟ್ಟರು. ಆಗ ಯಾರು ಲೈಫ್ ಪೆನ್‌ಷನ್ ಸ್ಕೀಮಿಗೆ ಹೊಸದಾಗಿ ಬಂದು ಆಪ್ಟ್ ಮಾಡಿಕೊಂಡರು ಅವರು 6 ತಿಂಗಳು ಪೆನ್‌ಷನ್ ಸರ್ಕಾರಕ್ಕೆ ಕೊಡಬೇಕಾಯಿತು.

ಶ್ರೀ ಬಿ. ಜಿ. ಬಣಕಾರ್ :—ಈ ಪೆನ್‌ಷನ್ ಕೊಡುವ ವಿಷಯದಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲದೆ, ಭೇದಭಾವ ಇಲ್ಲದೆ ಎಲ್ಲರಿಗೂ ಒಂದೇ ತರಹ ಏತಕ್ಕೆ ಈ ಪೆನ್‌ಷನ್ ಅನ್ನು ಕೊಡಬಾರದು? ಒಂದು ವರ್ಷ ಸರ್ವೀಸ್ ಆದವರೆಲ್ಲರಿಗೂ ಕೂಡ ಏತಕ್ಕೆ ಪೆನ್‌ಷನ್ ಅನ್ನು ಕೊಡಬಾರದು?

ಶ್ರೀ ಎಂ. ವೈ. ಘೋರ್ಪಡೆ :—1956 ನೇ ಇಸವಿಗಿಂತ ಈ ಪೆನ್‌ಷನ್ ಜಾರಿಯಲ್ಲಿರಲಿಲ್ಲ. 1964ನೇ ಇಸವಿಯಲ್ಲಿ ಈ ಲೈಫ್ ಪೆನ್‌ಷನ್ ಸ್ಕೀಮು ಜಾರಿಯಲ್ಲಿ ಬಂತು. 64 ರಲ್ಲಿ ಇದನ್ನು ರೆಟ್ರಾಸ್ಪೆಕ್ಟೀವ್ ಆಗಿ ಜಾರಿಗೆ ಕೊಡಲಿಲ್ಲ. ಮೈಸೂರು ಸರ್ಕಾರದವರು 1968 ರಲ್ಲಿ ಈ ರೀತಿ ಹೊಸ ಪೆನ್‌ಷನ್ ಸ್ಕೀಮಿಗೆ ಆಪ್ಟ್ ಮಾಡುವ ಅವಕಾಶ ಮಾಡಿಕೊಟ್ಟಿದ್ದಾರೆ. ಹಳೆಯ ಪೆನ್‌ಷನ್ನಿಗೆ ಸೇರಿದ ಜನ 68 ರಲ್ಲಿ ಬದುಕಿದ್ದರೂ ಅವರಿಗೆ ಹೊಸ ಪೆನ್‌ಷನ್ ಸ್ಕೀಮನ್ನು ಆಪ್ಟ್ ಮಾಡುವ ಅವಕಾಶವನ್ನು ಮಾಡಿಕೊಟ್ಟಿದೆ ಮತ್ತು ಈಗ ಮಿನಿಮಮ್ ಪೆನ್‌ಷನ್‌ಅನ್ನು 40 ರೂಪಾಯಿ ಮಾಡಿದ್ದೇವೆ.

ಶ್ರೀ ಬಿ. ಜಿ. ಬಣಕಾರ್ :—40 ರೂಪಾಯಿ ಪೆನ್‌ಷನ್‌ಅನ್ನು ಯಾವಾಗಿನಿಂದ ಕೊಡುತ್ತೀರಿ?

ಶ್ರೀ ಎಂ. ವೈ. ಘೋರ್ಪಡೆ :—ಮೊದಲು ಮಿನಿಮಮ್ ಪೆನ್‌ಷನ್ 30 ರೂಪಾಯಿ ಇತ್ತು. ಅದನ್ನು ನಾವು 40 ರೂಪಾಯಿ ಮಾಡಿದ್ದೇವೆ ಎಂದು ನಾನು ನನ್ನ ಬಜೆಟ್ ಭಾಷಣದಲ್ಲಿ ಹೇಳಿದ್ದೇನೆ. ಆದರೆ ಅದನ್ನು ಏಪ್ರಿಲ್ 1ನೇ ತಾರೀಖಿನಿಂದ ಕೊಡಲಾಗುತ್ತದೆ. ಆದರೆ ಅದನ್ನು ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಎಚ್. ಜಯಂಪ್ರಕಾಶ್ ನಾರಾಯಣ್ :—ಯಾವ ಕೇಡರ್‌ನವರೇ ಇರಲಿ ಅವರಿಗೆ ಪ್ರತಿಯೊಬ್ಬರಿಗೂ 40 ರೂಪಾಯಿ ಪೆನ್‌ಷನ್‌ಗಿಂತ ಕಡಿಮೆ ಇಲ್ಲದಂತಹ ಪೆನ್‌ಷನ್ ಕೊಡುವ ಈ ಒಂದು ನೀತಿಯನ್ನು ಜಾರಿಗೆ ತಂದಿದ್ದೀರಾ?

ಶ್ರೀ ಎಂ. ವೈ. ಘೋರ್ಪಡೆ :—ಏಪ್ರಿಲ್ 1ನೇ ತಾರೀಖಿನಿಂದ ಯಾರಿಗೂ 40 ರೂಪಾಯಿಗಳಿಗಿಂತ ಕಡಿಮೆ ಇಲ್ಲದಂತೆ ಪೆನ್‌ಷನ್ ಕೊಡಬೇಕೆಂದು ಮಾಡಿದೆ.

ಅಧ್ಯಕ್ಷರು :—ಈಗ ಪ್ರಶ್ನೋತ್ತರ ವೇಳೆ ಮುಗಿಯಿತು.